ಮೋಹಕವಾಗಿತ್ತೆಂದರೆ ಅವುಗಳ ಮೇಲಿನಿಂದ ಕಣ್ಣುಕೀಳುವುದು ಸಾಧ್ಯವಿರಲಿಲ್ಲ. ಕತೆಗಳೊಳಗೆ ನಮ್ಮನ್ನು ಕೊಂಡೊಯ್ಯುವ ಸ್ತಬ್ಧಚಿತ್ರಗಳು. ಕತೆಗಳಿಗೆ ಅನುಸಾರವಾಗಿ ಮಂದಿರಗಳು, ಮಸೀದಿ-ಚರ್ಚುಗಳು. ಕೋಟೆಕೊತ್ತಲಗಳು, ಹಳೆಯ ದಂತಕತೆಯ ದೃಶ್ಯಗಳ ಕುಟೀರಗಳು, ಉಪ್ಪರಿಗೆಮನೆಗಳು, ಉದ್ಯಾನವನಗಳು, ಪರ್ವತಶ್ರೇಣಿಗಳು. ಸುಂದರಾಂಗ ರಾಜಕುಮಾರನ ಚುಂಬನದಿಂದ ಎದ್ದೇಳುವ ನಿದ್ರಾಸುಂದರಿ, ಗೋಪುರದಲ್ಲಿ ಸಿಕ್ಕಿಬಿದ್ದ ಉದ್ದ ಕೂದಲಿನ ತರುಣಿ, ಒಂದು ಮೆಟ್ಟನ್ನು ಕಳಕೊಂಡು ನಡುರಾತ್ರಿಯಲ್ಲಿ ಮನೆಗೆ ಓಡುವ ಸಿಂಡ್ರೆಲ್ಲಾ, ಹುಲ್ಲನ್ನು ಚಿನ್ನವಾಗಿ ಹೆಣೆಯಲು ಒದ್ದಾಡುವ ಹೊಂಬಣ್ಣದ ಕೂದಲ ಹುಡುಗಿ - ಹೀಗೆ ಅಲ್ಲಿದ್ದ ದೃಶ್ಯರೂಪಕಗಳು ಒಂದೆರಡಲ್ಲ. ಒಂದು ಸಲ ಕಣ್ಣು ಹಾಯಿಸುವುದರಿಂದ ಅವೆಲ್ಲವನ್ನು ಅರಗಿಸಿಕೊಳ್ಳುವುದೂ ಸಾಧ್ಯವಿರಲಿಲ್ಲ. ಯಾವ್ಯಾವುದೋ ಕಾಲದ, ಪುರಾತನ ಗ್ರೀಕ್ ಕತೆಗಳದ್ದೋ, ಮಗಧ ರಾಜ್ಯದ ಚರಿತ್ರೆಯದ್ದೋ ದೃಶ್ಯರೂಪಕಗಳಲ್ಲದೆ, ಕೆಲವು ಪಂಚತಂತ್ರದ ಕತೆಗಳೂ ಕಣ್ಣಳತೆಯೊಳಗೆ ಬಂದಂತಾದವು.

ಕೋಣೆಗೆ ಕಾಲಿಟ್ಟದ್ದೇ ಪೆರಿನಾಝ಼ಳ ಚರ್ಯೆಯಲ್ಲಿ ಆದ ಬದಲಾವಣೆ ಗಮನಕ್ಕೆ ಬರದಿರಲಿಲ್ಲ. ಇದ್ದಕ್ಕಿದ್ದಂತೆ ಅವಳ ಕಣ್ಣುಗಳಲ್ಲಿ ಬೆಳಕು ಮೂಡಿದಂತಾಗಿತ್ತು. ನಡಿಗೆ ಚುರುಕಾಗಿತ್ತು.

ಶಿಶುಗೀತೆಗಳ ಹಿತವಾದ ಲಯಬದ್ಧ ರಾಗದ ಹಿನ್ನೆಲೆಯಲ್ಲಿ ವಿವಿಧ ಕಥಾಗಾರಗಳು ಜೀವಪಡೆದಂತೆ ಅನ್ನಿಸತೊಡಗಿ ಮಾತೇ ಹೊರಡದ ದಿಗ್ಭ್ರಮೆಯಲ್ಲಿದ್ದಾಗ, 'ದಾಸ್‌ಗುಪ್ತಜೀ, ನಾಲ್ಕನೇ ಅಂತಸ್ತಿನ ಎರಡನೇ ಚೌಕಟ್ಟನ್ನು ಕೆಳಗಿಳಿಸುವಿರೇ?' ಎನ್ನುವುದು ಕೇಳಿತು. ಆತ ಕವಾಟಿನ ಬದಿಯ ಚಕ್ರವನ್ನು ತಿರುಗಿಸತೊಡಗಿದ್ದೇ, ಗೊಂಬೆಗಳ ಸಮೇತ ಕೆಳಗಿಳಿದ ಚೌಕಟ್ಟು ಮೇಜಿನ ಮೇಲೆ ತಳವೂರಿತು. ಮೊಘಲರ ಕಾಲದ ದಿಲ್ಲಿಯಂತೆ ಕಂಡಿತು.

ಹಿಂಭಾಗದಲ್ಲಿದ್ದ ಒಂದು ಬೊಂಬೆ ಅಡ್ಡಬಿದ್ದಿತ್ತು. ಪೆರಿನಾಝ್ ಅದನ್ನು ನೋಡಿದ್ದೇ, 'ಪಾಪ, ಎಷ್ಟು ಹೊತ್ತಿನಿಂದ ಬಿದ್ದುಕೊಂಡಿದ್ದಳೋ!' ಎಂದು ಉಸುರಿದಳು. ಸಣ್ಣಸ್ವರದಲ್ಲಿ ಆ ಬೊಂಬೆಯೊಡನೆ ಏನೇನೋ ಗುಣುಗುಣಿಸುತ್ತ, ತನ್ನ ನೀಳವಾದ ಕೈಬೆರಳುಗಳಿಂದ ಮೃದುವಾಗಿ ಅದನ್ನು ಎತ್ತಿ, ಸವರಿ ಸರಿಯಾಗಿಟ್ಟಳು. ಅವಳ ಬೆರಳುಗಳ ಮೃದುತನ, ಮಾತನಾಡಿದ ರೀತಿ, ಸ್ವರದಲ್ಲಿನ ನೋವು... ನನ್ನ ಹೃದಯವನ್ನು ಮೀಟಿದಂತಾಯಿತು. ಇದು ಮಾನಸಿಕ ಅಸ್ವಸ್ಥತೆಯ ಲಕ್ಷಣವೇ?- ಹೇಳಿದಂತೆ ಇವಳಿಗೆ ಹುಚ್ಚಿರಬಹುದೇ? ಎಂದು ಮನಸ್ಸು ಅಳುಕಿತು. ಆದರೆ, ಮುಂದೆ ಅವಳೊಂದಿಗೆ ಮಾತನಾಡುತ್ತಿದ್ದಂತೆ ಈ ಅಳುಕೆಂಬುದು ಯಾವಾಗ ಮಾಯವಾಯಿತೋ



ತಿಳಿಯಲಿಲ್ಲ. ಅವಳ ವೃತ್ತಿಪರ ವರ್ತನೆ, ಮಾತಿನಲ್ಲಿನ ಶ್ರದ್ಧೆ, ನೇರ ನಡವಳಿಕೆ, ಕಲಾತ್ಮಕ ಆಸಕ್ತಿ ನನ್ನನ್ನು ಹಿಡಿದಿಟ್ಟಿತು. ಆದರೂ ಗೊಂಬೆಗಳ ಬಗೆಗೆ ಅವಳ ಕಣ್ಣುಗಳಲ್ಲಿದ್ದ ಮಮತೆ, ಅವುಗಳ ಬಗ್ಗೆ ಮಾತಾಡುವಾಗ ಸ್ವರದಲ್ಲಿದ್ದ ಸ್ನೇಹ, ವಾತ್ಸಲ್ಯಗಳನ್ನು ಗಮನಿಸದೆ ಇರುವುದೂ ಸಾಧ್ಯವಿರಲಿಲ್ಲ.

ಪೆರಿನಾಝ್ ಹೇಳತೊಡಗಿದ್ದಳು, 'ಡೆಲೋನೆ ಹೇಳಿದ್ದ - ನಿನಗೆ ಚರಿತ್ರೆಯಲ್ಲಿ ಆಸಕ್ತಿಯಿದೆ ಎಂದು. ಸಿಪಾಯಿ ದಂಗೆಯ ನಂತರದ ದಿಲ್ಲಿಯ ಮರುಸೃಷ್ಟಿ